4 ನೇ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಸ್ಪೇಷಲ್ ನ್ಯಾಯಾಧೀಶರು (ಪಿಸಿಎ) ಬೆಳಗಾವಿ ಇವರ ನ್ಯಾಯಾಲಯದಲ್ಲಿ
ಮುಕ್ಕಾಂಃ ಬೆಳಗಾವಿ.

ಸೇಷನ್ಸ್ ಕೇಸ್ ನಂಃ 239/2022
ಫ್ರಾಸಾಃ 5
ಆ ಸಾಃ 3

ಸಾಕ್ಷಿಯ ಹೆಸರುಃ ಮಂಜುನಾಥ ಪರಶುರಾಮ ಚಂದರಗಿ

ತಂದೆಯ ಹೆಸರುಃ ಪರಶುರಾಮ

ವಯಸ್ಸುಃ 35 ವರ್ಷ

ಉದ್ಯೋಗಃ ಒಕ್ಕಲುತನ

ವಾಸ್ತವ್ಯಃ ಎಂ.ಕೆ.ಹುಬ್ಬಳ್ಳಿ

ದಿನಾಂಕಃ **12-06-2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ನನಗೆ ಫ್ರಾಸಾ 2 ನಾಗೇಶ ಗೋತ್ತಿರುವುದಿಲ್ಲ. ನನ್ನ ಸ್ನೇಹಿತ ಬಾಳೇಶ ನನ್ನನ್ನು ಕಿತ್ತೂರು ಪೊಲೀಸ ಠಾಣೆಗೆ ಕರೆದುಕೊಂಡು ಹೋಗಿದ್ದನು. ಆಗ ಪೊಲೀಸರು ಸಹಿ ಹಾಕು ಎಂದು ಹೇಳಿದ ಕಾರಣ ನಾನು ಪೊಲೀಸ ಠಾಣೆಯಲ್ಲಿ ಸಹಿ ಹಾಕಿದೆನು. ನಾನು ಸಹಿ ಹಾಕುವಾಗ ಆ ಹಾಳೆ ಖಾಲಿ ಇತ್ತು ಸಾಕ್ಷಿಯು ತನ್ನ ಸಹಿಯನ್ನು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ2(ಸಿ) ಎಂದು ಗುರುತಿಸಲಾಯಿತು. ಪೊಲೀಸರು ನಮ್ಮನ್ನು ಬ್ರಿಜ್ ಹತ್ತಿರ

ಕರೆದುಕೊಂಡು ಬಂದು ಫೊಟೋ ತೆಗೆದರು. ಆಗ ನಾನು ನನ್ನ ಸ್ನೇಹಿತ ಬಾಳೇಶ ಮತ್ತು ನಾಗು ಮತ್ತು ಪೊಲೀಸರು ಇದ್ದೆವು. ಸಾಕ್ಷಿಯು ನಿಪಿ 3 ಮತ್ತು 4 ಫೊಟೋಗಳನ್ನು ಗುರುತಿಸಿದ್ದಾರೆ. ಬಾಳೇಶ ಅಲ್ಲಿ ಏನು ತೋರಿಸುತ್ತಿದ್ದಾನೆಂದು ನನಗೆ ಗೋತ್ತಿಲ್ಲ.

ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾರ್ಟಿ ಸವಾಲು ಮಾಡಲು ಅನುಮತಿ ನೀಡಲಾಯಿತು.

ಪಾಟೀ ಸವಾಲುಃ <u>ಸರ್ಕಾರಿ ಅಭಿಯೋಜಕರಿಂದಃ</u>

ದಿನಾಂಕ 17.03.2020 ರಂದು ಈ ಕೇಸಿನ ಪಿರ್ಯಾದಿ ಬಾಳೇಶನು ನನ್ನನ್ನು ಮತ್ತು ಇನ್ನೊಬ್ಬ ಪಂಚ ನಾಗೇಶನಿಗೆ ಮತ್ತು ಕಿತ್ತೂರ ಪೊಲೀಸ ಠಾಣೆ ವೃತ್ತ ನಿರೀಕ್ಷಕರಿಗೆ ಕೃತ್ಯ ನಡೆದ ಸ್ಥಳವನ್ನು ತೋರಿಸದನೆಂದರೆ ಸರಿಯಲ್ಲ. ಆ ಸ್ಥಳದಲ್ಲಿ ಆತನು ಶೌಚಾಲಯಕ್ಕೆ ಹೋಗಿ ಬಂದು ದಾರಿಯಿಂದ ಮನೆಗೆ ಹೋಗುತ್ತಿರುವಾಗ ಯಾರೋ ಇಬ್ಬರೂ ಮೋಟರ ಸೈಕಲ ಮೇಲೆ ಬಂದು ಆತನ ಹತ್ತಿರ ನಿಲ್ಲಿಸಿ, ಒಬ್ಬನು ಖಾರದ ಪುಡಿಯನ್ನು ಗೋಜ್ಜಲು ಇನ್ನೊಬ್ಬನು ಆತನ ಅಂಗಿ ಕಿಸೆಗೆ ಕೈ ಹಾಕಿ ಒತ್ತಾಯದಿಂದ ಮೊಬೈಲ ಫೋನ ಹ್ಯಾಂಡ ಸೇಟ್ಟನ್ನು ಕಸೆದುಕೊಂಡು ಹೋದ ಸ್ಥಳವೆಂದು ತೋರಿಸಿದ ಮೇರೆಗೆ ನನಗೆ ಈಗ ಓದಿ ಹೇಳಿದಂತೆ ಅದೇ ಸ್ಥಳದಲ್ಲಿ ನಿಪಿ 2 ರಂತೆ ಪಂಚನಾಮೆ ಮಾಡಲಾಯಿತು ಎಂದರೆ ಸರಿಯಲ್ಲ. ಪಂಚನಾಮೆ ಕಾಲಕ್ಕೆ ನನಗೆ ಈಗ ತೋರಿಸಿದ ನಿಪಿ 3

ಮತ್ತು 4 ಫೊಟೋಗಳನ್ನು ತೆಗೆಯಲಾಯಿತು ಎಂದರೆ ಸರಿಯಲ್ಲ. ನಿಪಿ 2 ಎರಡು ಪಂಚನಾಮೆಗೆ ನಾನು ಪೊಲೀಸಠಾಣೆಯಲ್ಲಿ ಸಹಿ ಹಾಕಿದೆನೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆಂದರೆ ಸರಿಯಲ್ಲ. ಆರೋಪಿತರ ಮಾತು ಕೇಳಿ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆದಂರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರ ಮಾನ್ಯ ವಕೀಲರಿಂದಃ

ಪಾಟೀ ಸವಾಲು ಇಲ್ಲವೆಂದು ಹೇಳುತ್ತಾರೆ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಅದೆ

**4** ನೇ ಅಧಿಕ ಸತ್ರ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರು **(**ಪಿಸಿಎ**)** ಬೆಳಗಾವಿ.